

ಹಸುರು– ಹಿಮಾಚ್ಛಾದಿತ ಉತ್ತರಾಖಂಡದ ತುಂಗಾನಾಥ ಗಿರಿಶೃಂಗಗಳ ಚೆಲುವು

ಅವರಿಂದ ಪ್ರಶಸ್ತಿ ಪಡೆದುಕೊಂಡೆ. ಇದು ಛಾಯಾಗ್ರಹಣದಲ್ಲಿ ನನಗಿದ್ದ ಪ್ರೀತಿ, ಆಸಕ್ತಿಯನ್ನು ಮತ್ತಷ್ಟು ಹೆಚ್ಚಿಸಿತು. ಆನಂತರ ಗ್ರಾಮೀಣ ಜನಜೀವನ, ಟ್ರಾವೆಲ್ ಫೋಟೊಗ್ರಫಿ, ಸ್ಟ್ರೀಟ್ ಫೋಟೊಗ್ರಫಿ ಹೀಗೆ ಬಹು ಆಯಾಮಗಳಲ್ಲಿ ಫೋಟೊಗ್ರಫಿ ಮಾಡಲು ಶುರುಮಾಡಿದೆ' ಎನ್ನುತ್ತಾರೆ.

ಫೋಟೊ ತೆಗೆಯಲೆಂದು ಬೇರೆಬೇರೆ ಸ್ಥಳಗಳಿಗೆ ಹೋಗುವುದನ್ನು ಆರಂಭಿಸಿದ ರವಿಶಂಕರ್, ಭಾರತದ ಬಹುಪಾಲು ಐತಿಹಾಸಿಕ ಜಾಗಗಳಿಗೆ ಭೇಟಿ ನೀಡಿದ್ದಾರೆ. ಭಾರತದ ಐತಿಹಾಸಿಕ– ಸಾಂಸ್ಕೃತಿಕ ಸ್ಥಳಗಳನ್ನು ತಮ್ಮ ಛಾಯಾಚಿತ್ರಗಳಲ್ಲಿ ದಾಖಲಿಸಿದ್ದಾರೆ. ಗ್ರಾಮೀಣ ಜನಜೀವನ ಬಿಂಬಿಸುವ ಸಾಕಷ್ಟು ಛಾಯಾಚಿತ್ರಗಳನ್ನು ತೆಗೆದಿದ್ದಾರೆ. ಹಿಮಾಲಯ ಚಾರಣ ಚಿತ್ರಗಳೂ ಇವರ ನೆಚ್ಚಿನ ಸಂಗ್ರಹದಲ್ಲಿವೆ.

ಸದ್ಯ, ಇನ್ಫೋಸಿಸ್ ಬಿಪಿಎಂ ಸಂಸ್ಥೆಯ ಕ್ವಾಲಿಟಿ ವಿಭಾಗದಲ್ಲಿ ಕಮ್ಯುನಿಕೇಷನ್ ಡಿಸೈನ್ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿರುವ ರವಿಶಂಕರ್ ಅವರಿಗೆ ಈಚೆಗೆ ಛಾಯಾಗ್ರಹಣದಲ್ಲಿ ರಾಷ್ಟ್ರೀಯ ಪ್ರಶಸ್ತಿಯೂ ಲಭಿಸಿದೆ.

## ಬಾಹುಬಲಿ ಮಹಾಮಸ್ತಕಾಭಿಷೇಕ

ರವಿಶಂಕರ್ ಅವರು 2018ರಲ್ಲಿ ತೆಗೆದ ಶ್ರವಣಬೆಳಗೊಳದ ಬಾಹುಬಲಿ ಮೂರ್ತಿಯ ಮಹಾಮಸ್ತಕಾಭಿಷೇಕ ಚಿತ್ರಗಳಿಗೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಕೇಂದ್ರ ವಾರ್ತಾ ಹಾಗೂ ಪ್ರಸರಣ ಸಚಿವಾಲಯದ 'ಫೋಟೊ ಡಿವಿಷನ್ಸ್' ನಡೆಸುವ '8ನೇ ನ್ಯಾಷನಲ್ ಫೋಟೊಗ್ರಫಿ ಅವಾರ್ಡ್' ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದುಕೊಂಡಿದೆ.

2019ರಲ್ಲಿ ನಡೆದ ಈ ರಾಷ್ಟ್ರೀಯ ಛಾಯಾಗ್ರಹಣ ಸ್ಪರ್ಧೆಯಲ್ಲಿ ರವಿಶಂಕರ್ ಅವರು, ಮಹಾಮಸ್ತಕಾಭಿಷೇಕದ ಚಿತ್ರವನ್ನು ಕಳುಹಿಸಿದ್ದು,



ಕ್ಯಾಮೆರಾ ನೋಟದಲ್ಲಿ ಹಳ್ಳಿಯ ಬದುಕಿನ ತುಣುಕು

ಪ್ರಶಸ್ತಿಯ ಮನ್ನಣೆಯನ್ನು ಛಾಯಾಚಿತ್ರ ಪಡೆದುಕೊಂಡಿತು.

'ಸ್ನೇಹಿತರು ನನಗೆ ಈ ನ್ಯಾಷನಲ್ ಫೋಟೊಗ್ರಫಿ ಸ್ಪರ್ಧೆ ಕುರಿತು ಮಾಹಿತಿ ನೀಡಿದರು. ಈ ರಾಷ್ಟ್ರೀಯ ಸ್ಪರ್ಧೆಯಲ್ಲಿ ಮುಖ್ಯವಾಗಿ ಮೂರು ವಿಭಾಗಗಳಿರುತ್ತವೆ. ಒಂದು, ಜೀವಮಾನದ ಸಾಧನೆ. ಅದಕ್ಕೆ ಸರ್ಕಾರವೇ ಸೂಕ್ತ ಛಾಯಾಗ್ರಾಹಕನನ್ನು ಹುಡುಕಿ ಸನ್ಮಾನಿಸುತ್ತದೆ. ಇನ್ನೆರಡು, ವೃತ್ತಿಪರ ಹಾಗೂ ಹವ್ಯಾಸಿ ಛಾಯಾಗ್ರಹಣ ಸ್ಪರ್ಧೆಗಳು. ವೃತ್ತಿಪರರಿಗೆ ಹಾಗೂ ಹವ್ಯಾಸಿ ಛಾಯಾಗ್ರಾಹಕರಿಗೆ ನಿರ್ದಿಷ್ಟ ವಿಷಯ ನೀಡಲಾಗುತ್ತದೆ. ಕೊಟ್ಟಿರುವ ವಿಷಯದ ಮೇಲೆ 10–15 ಚಿತ್ರಗಳನ್ನು ಸ್ಪರ್ಧೆಗೆ ಕಳುಹಿಸಬೇಕು. ನಾನು ಹವ್ಯಾಸಿ ಛಾಯಾಗ್ರಹಣ ವಿಭಾಗದಲ್ಲಿ ಸ್ಪರ್ಧಿಸಿದೆ. 'ಇಂಡಿಯನ್ ಕಲ್ಚರಲ್ ಹೆರಿಟೇಜ್' ಎಂಬ ವಿಷಯದಲ್ಲಿ, ನಾನು ತೆಗೆದ ಬಾಹುಬಲಿಯ ಚಿತ್ರಗಳು ಪ್ರಶಸ್ತಿಗೆ ಆಯ್ಕೆಯಾದವು' ಎಂದು ಸಂತಸ ಹಂಚಿಕೊಳ್ಳುತ್ತಾರೆ ರವಿಶಂಕರ್.

2020ರಲ್ಲೇ ನಡೆಯಬೇಕಿದ್ದ ಪ್ರಶಸ್ತಿ ಪ್ರದಾನ ಸಮಾರಂಭ ಕೊರೊನಾ ಕಾರಣವಾಗಿ ಮುಂದೂಡಿ ಇದೇ ಮಾರ್ಚ್ 7ರಂದು ನಡೆದಿದೆ. ಭಾರತ ಸರ್ಕಾರದ ಪ್ರತಿಷ್ಠಿತ ಪ್ರಶಸ್ತಿ ಇದಾಗಿದ್ದು, ಹವ್ಯಾಸಿ ಛಾಯಾಗ್ರಹಣ ಸ್ಪರ್ಧೆಗೆ ಬಂದ ಸಾವಿರಾರು ಚಿತ್ರಗಳ ಪೈಕಿ ಆರು ಜನಕ್ಕೆ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಅದರಲ್ಲಿ ರವಿಶಂಕರ್ ಅವರೂ ಒಬ್ಬರಾಗಿದ್ದಾರೆ.